# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ | 916 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) |
| 3) | ಉತ್ತರಿಸಬೇಕಾದ ದಿನಾಂಕ | 15.12.2025 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ 18-35 ವರ್ಷದ ಯುವಕರ ನಿರುದ್ಯೋಗ ಪ್ರಮಾಣ ಎಷ್ಟು; ಜಿಲ್ಲಾವಾರು ನಿಖರ ಮತ್ತು ನವೀಕರಿಸಿದ ಉದ್ಯೋಗದ ಮಾಹಿತಿಯನ್ನು ಸರ್ಕಾರ ಯಾವಾಗ ಪ್ರಕಟಿಸುತ್ತದೆ ; | ರಾಜ್ಯದಲ್ಲಿನ ನಿರುದ್ಯೋಗ ಪ್ರಮಾಣ ದರದ ಸಮೀಕ್ಷೆಯನ್ನು ಇಲಾಖೆಯಿಂದ ನಿರ್ವಹಿಸಿರುವುದಿಲ್ಲ.<br>ಮುಂದುವರೆದು, ರಾಜ್ಯದ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನವೆಂಬರ್-2025ರ ಅಂತ್ಯಕ್ಕೆ ಒಟ್ಟು 2,23,669 ಅಭ್ಯರ್ಥಿಗಳು ಉದ್ಯೋಗ ನೆರವಿಗಾಗಿ ನೋಂದಾಯಿಸಿರುತ್ತಾರೆ. |
| (ಆ) Skill Development (Kaushalya Karnataka / PMKVY) ತರಬೇತಿ ಪಡೆದ ಯುವಕರಲ್ಲಿ ಉದ್ಯೋಗ ಪಡೆದವರ ಪ್ರಮಾಣ ಎಷ್ಟು; ಈ ಯೋಜನೆಗಳ ಪರಿಣಾಮಕಾರಿತ್ವದ ವಾರ್ಷಿಕ ವರದಿಯನ್ನು ಸರ್ಕಾರ ಪ್ರಕಟಿಸುತ್ತಿದೆಯೇ; | **ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ** :<br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯ ಸರ್ಕಾರದ ಮಹಾತ್ವಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಸದರಿ ಯೋಜನೆಯಡಿ 2017-18ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಒಟ್ಟು 256197 ಅಭ್ಯರ್ಥಿಗಳು ವಿವಿಧ ಸರ್ಕಾರಿ ಹಾಗೂ ಖಾಸಗಿ ತರಬೇತಿ ಸಂಸ್ಥೆಗಳ ಮುಖೇನ ವಿವಿಧ ವೃತ್ತಿಗಳಡಿ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದಿದ್ದು, ಸದರಿ ತರಬೇತಿಯಡಿ ಒಟ್ಟು 35644 ಅಭ್ಯರ್ಥಿಗಳು ಉದ್ಯೋಗಾವಕಾಶ / ಸ್ವಉದ್ಯೋಗ ಪಡೆದಿರುತ್ತಾರೆ.<br>**ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ ;**<br>ಕೇಂದ್ರ ಸರ್ಕಾರದ ಪ್ರಾಯೋಜಿತ ರಾಜ್ಯ ಅನುಷ್ಠಾನ ಯೋಜನೆಯಾದ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ ಒಟ್ಟು 33956 ಅಭ್ಯರ್ಥಿಗಳು ವಿವಿಧ ಖಾಸಗಿ ತರಬೇತಿ ಸಂಸ್ಥೆಗಳ ಮುಖೇನ ವಿವಿಧ ವೃತ್ತಿಗಳಡಿ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದಿದ್ದು, ಸದರಿ ತರಬೇತಿಯಡಿ ಒಟ್ಟು 1222 ಅಭ್ಯರ್ಥಿಗಳು ಉದ್ಯೋಗವಕಾಶ/ ಸ್ವಉದ್ಯೋಗ ಪಡೆದಿರುತ್ತಾರೆ.<br>ಮೇಲೆ ತಿಳಿಸಿದ ಯೋಜನೆಗಳ ಕುರಿತು ಇಲಾಖೆಯ ವಾರ್ಷಿಕ ವರದಿಯಲ್ಲಿ ಪ್ರಕಟಿಸಲಾಗಿದೆ. |

| | |
|---|---|
| (ಇ) ಯುವಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಹೊಸ ಕ್ರಮಗಳು ಯಾವುವು? (ಉದ್ಯೋಗ ಸೃಷ್ಟಿ, ಸ್ಥಳೀಯರಿಗೆ ಉದ್ಯೋಗ ಆದ್ಯತೆ, IT-enabled recruitment, ಕೈಗಾರಿಕಾ ತರಬೇತಿ ಕೇಂದ್ರಗಳು, ಉದ್ಯಮ ಆರಂಭಿಸಲು ಸಹಾಯ ಇತ್ಯಾದಿ ಒಳಗೊಂಡಂತೆ) | ಕೈಗಾರಿಕೆ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಒದಗಿಸಲು ನೇರ ಸಂದರ್ಶನ/ಮಿನಿ ಉದ್ಯೋಗ ಮೇಳಗಳನ್ನು ಆಯೋಜಿಸಲಾಗುತ್ತಿದೆ.<br><br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು 2016-17 ನೇ ಸಾಲಿನಲ್ಲಿ ಸ್ಥಾಪಿಸಲಾಗಿದ್ದು, ಇಲಾಖೆಯು ಕೈಗಾರಿಕಾ ತರಬೇತಿ ಆಯುಕ್ತಾಲಯ (ಐ.ಟಿ.ಐ)/ ಕೆ.ಜಿ.ಟಿ.ಟಿ.ಐ-ಕೆ.ಜಿ.ಎಂ.ಎಸ್.ಡಿ.ಸಿ/ಜಿ.ಟಿ.ಟಿ.ಸಿ/ ಮೋಕ್ಷಗೊಂಡಂ ತರಬೇತಿ ಸಂಸ್ಥೆ/ರಾಷ್ಟ್ರೀಯ ಜೀವನೋಪಾಯ ಮಿಷನ್ (ಗ್ರಾ/ನ)/ಕೆ.ಎಸ್.ಡಿ.ಸಿ ಗಳನ್ನು ಒಳಗೊಂಡಿರುತ್ತದೆ.<br><br>**ಉದ್ಯೋಗ ಮೇಳ** : 2022-23 ನೇ ಸಾಲಿನಿಂದ 2025-26 ನೇ ಸಾಲಿನವರೆಗೆ ರಾಜ್ಯದಲ್ಲಿ ನಡೆಸಲಾದ ಒಟ್ಟು 31 ಉದ್ಯೋಗ ಮೇಳಗಳ ಮುಖೇನ 26624 ಅಭ್ಯರ್ಥಿಗಳು ಉದ್ಯೋಗಾವಕಾಶ ಪಡೆದಿದ್ದು, 52789 ಅಭ್ಯರ್ಥಿಗಳು Shortlist ಗೊಂಡಿರುತ್ತಾರೆ.<br><br>ಯುವಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ:<br>1. ಕೌಶಲ್ಯ ನೀತಿ: ಕೌಶಲ್ಯಾಭಿವೃದ್ಧಿಯ ಪ್ರಕ್ರಿಯೆಗಳನ್ನು ಏಕರೂಪಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಭಾಗಿದಾರರನ್ನು ಒಳಗೊಂಡಂತೆ ನೀತಿಯನ್ನು ರೂಪಿಸಿ ಬಿಡುಗಡೆಗೊಳಿಸಲಾಗಿದೆ.<br>2. ಸಿ.ಎಂ.ಕೆ.ಕೆ.ವೈ 2.0: ಯೋಜನೆಯನ್ನು ಪರಿಣಾಮಕಾರಿಯಾಗಿ ಹಾಗೂ ತ್ವರಿತವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಆಯವ್ಯಯ ಘೋಷಣೆಯಂತೆ ಕ್ರಮವಹಿಸಲಾಗುತ್ತಿದೆ.<br>3. Industry Linkage Cell ಮತ್ತು Future Skills: ಯುವಕರಿಗೆ ಭವಿಷ್ಯದ ಕೌಶಲ್ಯ (Future Skills) ತರಬೇತಿಗಳನ್ನು ಕೈಗಾರಿಕಾ ಆಧಾರಿತ ಬೇಡಿಕೆಗನುಸಾರ ರೂಪಿಸಿ, ಉದ್ಯೋಗಾವಕಾಶ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.<br>4. ವಿದೇಶಿ ಭಾಷಾ ತರಬೇತಿ : ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಉದ್ಯೋಗಾವಕಾಶಗಳನ್ನು ಪಡೆಯಲು ಜರ್ಮನ್, ಇಂಗ್ಲೀಷ್, ಸ್ಪ್ಯಾನಿಷ್ ಹಾಗೂ ಇತರೆ ಭಾಷೆಗಳಲ್ಲಿ ತರಬೇತಿ ನೀಡಲು ಕ್ರಮವಹಿಸಲಾಗುತ್ತಿರುತ್ತದೆ.<br>5. ಕಲಿಕೆ ಜೊತೆ ಕೌಶಲ್ಯ : ಪದವಿ ತರಗತಿಗಳಲ್ಲಿ ಕೌಶಲ್ಯ ಸುಧಾರಿತ ಕಲಿಕೆ ಜೊತೆ ಕೌಶಲ್ಯ ಕಾರ್ಯಕ್ರಮದಡಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ 50 ಗಂಟೆಗಳ ಕೈಗಾರಿಕಾ ಆಧಾರಿತ ತರಬೇತಿ ನೀಡಲಾಗುತ್ತಿದೆ. |

| | |
|---|---|
| | ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರವು ರಾಜ್ಯದಲ್ಲಿ ಉದ್ಯಮಶೀಲತಾಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರಗಳು.<br>2. ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮಗಳು.<br>3. ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು.<br>4. ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು.<br><br>ನಿರುದ್ಯೋಗಿ ಯುವಕರಿಗೆ ಉದ್ಯಮಶೀಲತೆ ತರಬೇತಿ ನೀಡಿ ಅವರನ್ನು ಉದ್ಯಮಶೀಲರಾಗಲು ಪ್ರೇರೇಪಿಸಲಾಗುತ್ತಿದೆ. |

ಸಂಖ್ಯೆ: ಕೌಉಜೀಇ 32 ಕೌಗುಪ್ರ 2025

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.